ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 29–01–2019

## ಪತ್ರಿಕಾ ಆಮಂತ್ರಣ

1. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರ ಸ್ಮರಣಾರ್ಥವಾಗಿ ಹುತಾತ್ಮ ದಿನಾಚರಣೆ:

   ದಿನಾಂಕ: 30–01–2019

   ಭಜನೆ: 10.30 ರಿಂದ 11.00 ಗಂಟೆವರೆಗೆ

   ಮೌನ ಆಚರಣೆ ಆರಂಭ: ಬೆಳಿಗ್ಗೆ 11.00 ಗಂಟೆಯಿಂದ

   ಮೌನ ಆಚರಣೆ ಮುಕ್ತಾಯ : ಬೆಳಿಗ್ಗೆ 11.02 ಗಂಟೆವರೆಗೆ

   ಸ್ಥಳ: ವಿಧಾನಸೌಧ ಮತ್ತು ವಿಕಾಸಸೌಧದ ನಡುವೆ ಇರುವ ಮಹಾತ್ಮ ಗಾಂಧೀಜಿಯವರ ಪ್ರತಿಮೆ ಬಳಿ.

2. ರಾಷ್ಟ್ರೀಯ ಮಾದರಿ ಸಮೀಕ್ಷೆ 77 ನೇ ಸುತ್ತಿನ "Land and Livestock Holding of Household and Situation Asessment of Agricultural Households & Debt and Investment ಎಂಬ ವಿಷಯಗಳ ಕ್ಷೇತ್ರ ಸಮೀಕ್ಷೆ ಕುರಿತ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ.

   ದಿನಾಂಕ: 30–01–2019 ಬುಧವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ

   ಸ್ಥಳ: ಹೆಚ್.ಆರ್. ಹರಕೇರಿ **ಸಭಾಂಗಣ**, ಕೃಷಿ ತಂತ್ರಜ್ಞರ ಸಂಸ್ಥೆ (ಐಎಟಿ) ನಂ. 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052.

3. ಕರ್ನಾಟಕ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿರುವ ನೂತನ ಸದಸ್ಯರಾದ ಕೆ. ಎ. ತಿಪ್ಪೇಸ್ವಾಮಿ ಅವರಿಂದ ಪ್ರಮಾಣ ವಚನ ಸ್ವೀಕಾರ.

   ದಿನಾಂಕ: 30–01–2019 ಬುಧವಾರ, ಸಮಯ: ಬೆಳಿಗ್ಗೆ 11–30 ಗಂಟೆಗೆ

   ಸ್ಥಳ: ವಿಧಾನಪರಿಷತ್ತಿನ ಸಭಾಪತಿಗಳ ಕಚೇರಿ, ಕೊಠಡಿ ಸಂಖ್ಯೆ 118, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.

4. <u>Obituarial Reference</u>
   Reg: Sad Demise of T.S. Amar Kumar, Senior Advocate, President, Advocates Association, Bengaluru and Acting Chief Justice, High Court of Karnataka

   Date: 30-01-2019, Wednesday, Time 4.00 PM.

   Venue: Court Hall No. 1 of the Principal Bench of the High Court of Karnataka.

**ಪತ್ರಿಕಾ ಪ್ರಕಟಣೆ**

## ಫೆಬ್ರವರಿ 6 ರಂದು
## ಕರ್ನಾಟಕ ವಿಧಾನಸಭೆಯ ಅಧಿವೇಶನ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ಕರ್ನಾಟಕದ 15 ನೇ ವಿಧಾನಸಭೆಯ ಮೂರನೇ ಅಧಿವೇಶನವು ಫೆಬ್ರವರಿ 6 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ವಿಧಾನಸೌಧಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ವಿಧಾನಸಭೆಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

## ಜನವರಿ 30 ಮತ್ತು 31 ರಂದು
## ಎರಡು ದಿನಗಳ ರಾಷ್ಟ್ರೀಯ ಮಾದರಿ ಸಮೀಕ್ಷೆ ಕುರಿತ ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಮಾದರಿ ಸಮೀಕ್ಷೆ 77 ನೇ ಸುತ್ತಿನ "Land and Livestock Holding of Household and Situation Asessment of Agricultural Households & Debt and Investment ಎಂಬ ವಿಷಯಗಳ ಕ್ಷೇತ್ರ ಸಮೀಕ್ಷೆ ಕುರಿತ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರವನ್ನು ಜನವರಿ 30 ಮತ್ತು 31 ರಂದು ಹಮ್ಮಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಈ ವಿಷಯಗಳ ಕ್ಷೇತ್ರ ಸಮೀಕ್ಷೆ ಕುರಿತ ಈ ತರಬೇತಿ ಕಾರ್ಯಾಗಾರದಲ್ಲಿ, ಎಲ್ಲಾ ಜಿಲ್ಲೆಗಳ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಸಂಬಂಧಿಸಿದ ಕ್ಷೇತ್ರ ಸಮೀಕ್ಷಕರು ಭಾಗವಹಿಸಲಿದ್ದಾರೆ.

ಈ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಜನವರಿ 30 ರಂದು ಬೆಳಿಗ್ಗೆ 10.30 ಗಂಟೆಗೆ ಹೆಚ್.ಆರ್. ಹರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ (ಐಎಟಿ), ನಂ. 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052 ಇಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

## ವಿಧಾನಸಭಾಧ್ಯಕ್ಷರ ಸಂತಾಪ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ಮಾಜಿ ಕೇಂದ್ರ ಸಚಿವ ಜಾರ್ಜ್ ಫರ್ನಾಂಡೀಸ್ ನಿಧನಕ್ಕೆ ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷ ಕೆ. ಆರ್. ರಮೇಶ್‌ಕುಮಾರ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಭಾರತ ದೇಶದ ಸಾರ್ವಜನಿಕ ಜೀವನದಲ್ಲಿ ಸದಾಕಾಲ ತನ್ನ ನಿಲುವಿನಿಂದ ಸಂಚಲನವನ್ನು ಮೂಡಿಸಿ, ಬಾಯಿಲ್ಲದವರ ಧ್ವನಿಯಾಗಿ ಬದುಕಿದ ಹಿರಿಯ ನಾಯಕ ಜಾರ್ಜ್ ಫರ್ನಾಂಡೀಸ್ ಅವರಿಗೆ ನನ್ನ ಅಶ್ರುತರ್ಪಣವನ್ನು ಅರ್ಪಿಸುತ್ತೇನೆ, ಎಂದು ಅವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

## ಗೃಹ ಸಚಿವರ ಸಂತಾಪ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ಮಾಜಿ ಕೇಂದ್ರ ಸಚಿವ ಜಾರ್ಜ್ ಫರ್ನಾಂಡೀಸ್ ನಿಧನಕ್ಕೆ ಗೃಹ ಸಚಿವ ಎಂ.ಬಿ. ಪಾಟೀಲ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಹೆಮ್ಮೆಯ ಪುತ್ರನಾಗಿ ತಮ್ಮ ಹೋರಾಟಗಳ ಮೂಲಕವೇ ರಾಷ್ಟ್ರ ನಾಯಕರಾಗಿ ಬೆಳೆದ ಜಾರ್ಜ್, ಸಮಾಜವಾದಿ ಸಿದ್ಧಾಂತಗಳ ಪ್ರಬಲ ಪ್ರತಿಪಾದಕರಾಗಿ, ರಾಜಕಾರಣದಲ್ಲಿ ಮಾದರಿಯಾಗಿದ್ದರು.

ಕೇಂದ್ರ ಸರ್ಕಾರದಲ್ಲಿ ಉನ್ನತ ಇಲಾಖೆಗಳ ಸಚಿವರಾಗಿದ್ದಾಗಲೂ, ತಮ್ಮ ಸರಳತೆಯಿಂದಲೇ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಅವರು ಅತ್ಯುತ್ತಮ ಸಂಸದೀಯ ಪಟುವಾಗಿದ್ದರು.

12 ನೇ ಶತಮಾನದ ಕ್ರಾಂತಿಕಾರಿ ಅಣ್ಣ ಬಸವಣ್ಣನವರ ತತ್ವ ಆದರ್ಶಗಳಿಗೆ ಮಾರು ಹೋಗಿದ್ದ ಜಾರ್ಜ್ ಫರ್ನಾಂಡೀಸ್, ತಮ್ಮ ಜೀವನದಲ್ಲಿಯೂ ಅವುಗಳನ್ನು ಅಳವಡಿಸಿಕೊಂಡಿದ್ದರು. ಅವರ ನಿಧನದಿಂದ ರಾಷ್ಟ್ರ ಶ್ರೇಷ್ಠ ಸಮಾಜವಾದಿ ನಾಯಕನನ್ನು ಕಳೆದುಕೊಂಡಂತಾಗಿದೆ ಎಂದು ಗೃಹ ಸಚಿವ ಎಂ.ಬಿ. ಪಾಟೀಲ್ ಅವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

## ಕಂದಾಯ ಸಚಿವರ ಸಂತಾಪ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ಕೇಂದ್ರದ ಮಾಜಿ ಸಚಿವ, ಸಮಾಜವಾದಿ ನಾಯಕ ಮತ್ತು ಹೆಸರಾಂತ ಕಾರ್ಮಿಕ ಮುಖಂಡ ಜಾರ್ಜ್ ಫರ್ನಾಂಡೀಸ್ ಅವರ ನಿಧನದಿಂದ ದೇಶದ ಜನ ಸಮುದಾಯಗಳಿಗೆ ಅಪಾರ ನಷ್ಟವಾಗಿದೆ ಎಂದು ಕಂದಾಯ ಸಚವ ಆರ್. ವಿ. ದೇಶಪಾಂಡೆ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

"ಕರ್ನಾಟಕದ ಮಣ್ಣಿನ ಮಗನಾದ ಫರ್ನಾಂಡೀಸ್ ಅವರು ದೂರದ ಮುಂಬೈ ಮತ್ತು ಬಿಹಾರಗಳಲ್ಲಿ ತಮ್ಮ ರಾಜಕೀಯ ನೆಲೆಕಂಡುಕೊಂಡು ಜನಾನುರಾಗಿಯಾಗಿದ್ದು, ಒಂದು ಅಭೂತಪೂರ್ವ ಸಂಗತಿಯಾಗಿದೆ. ಅವರು ತಮ್ಮ ಸಚ್ಚಾರಿತ್ರ್ಯ ಮತ್ತು ಅಸಾಧಾರಣವಾದ ಪ್ರಾಮಾಣಿಕತೆಗಳಿಂದ ಶೋಷಿತ ವರ್ಗಗಳ ಕಣ್ಮಣಿಯಾಗಿದ್ದರು.

"ಕೇಂದ್ರ ಸರ್ಕಾರದ ಹಲವು ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದ ಫರ್ನಾಂಡೀಸ್ ಅವರು ತಮ್ಮ ಸರಳತೆ ಮತ್ತು ಹೋರಾಟದ ಕೆಚ್ಚಿನಿಂದಲೂ ಅನನ್ಯರಾಗಿದ್ದರು. ಅವರ ಗುಣಗಳು ಬಹುಕಾಲ ಮಾದರಿಯಾಗಿ ಉಳಿಯುವುದರಲ್ಲಿ ಅನುಮಾನವಿಲ್ಲ ಎಂದು ದೇಶಪಾಂಡೆ ಅವರು ಕಂಬನಿ ಮಿಡಿದಿದ್ದಾರೆ ದೇವರು ಫರ್ನಾಂಡೀಸ್ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

## ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

2018-19 ನೇ ಸಾಲಿನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ, ಎರಡು ತಿಂಗಳ ಅವಧಿಯ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ವಿಶೇಷ ಘಟಕ ಯೋಜನೆಯಲ್ಲಿ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳು, ಜಾತಿ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ ಹಾಗೂ ಆಧಾರ್/ವೋಟರ್ ಐಡಿ ಜೆರಾಕ್ಸ್ ಪ್ರತಿಯೊಂದಿಗೆ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010 ರವರಿಂದ ಜನವರಿ 30 ರೊಳಗಾಗಿ ಅರ್ಜಿ ಪಡೆದು, ಭರ್ತಿಮಾಡಿದ ಅರ್ಜಿಯನ್ನು ಈ ವಿಳಾಸಕ್ಕೆ ಸಲ್ಲಿಸಬಹುದಾಗಿದೆ.

ಜನವರಿ 31 ರಂದು ಬೆಳಿಗ್ಗೆ 11–00 ಗಂಟೆಯೊಳಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010 ಈ ಕಚೇರಿಯಲ್ಲಿ ನಡೆಯುವ ಸಂದರ್ಶನಕ್ಕೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬಹುದಾಗಿದೆ.

ತರಬೇತಿಯು ಎರಡು ತಿಂಗಳ ಅವಧಿಯದಾಗಿದ್ದು, ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 2500/– ಶಿಷ್ಯವೇತನವನ್ನು ನೀಡಲಾಗುವುದು. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅಭ್ಯರ್ಥಿಯಾಗಿದ್ದು, 18 ರಿಂದ 45 ವರ್ಷ ವಯೋಮಿತಿಯವರಾಗಿರಬೇಕು.

ಈ ಅವಧಿಯಲ್ಲಿ ಬೇಸಿಕ್ ಕಂಪ್ಯೂಟರ್ ಮತ್ತು ಟ್ಯಾಲಿ ತರಬೇತಿಯನ್ನು ನೀಡಲಾಗುತ್ತಿದ್ದು, ಎಸ್.ಎಸ್.ಎಲ್.ಸಿ ಹಾಗೂ ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ನೋಂದಣಿ ಮಾಡಿರಬೇಕು ಎಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ, ಜಿಲ್ಲಾ ಕೈಗಾರಿಕೆ ಕೇಂದ್ರ, ಬೆಂಗಳೂರು ನಗರ ಜಿಲ್ಲೆಯ ಪ್ರಕಟಣೆ ತಿಳಿಸಿದೆ.

## ಹೊಸ ಆಟೋರಿಕ್ಷಾ ರಹದಾರಿ ವಿತರಣೆ
## ಫೆಬ್ರವರಿ 1 ರಿಂದ ಮಾರ್ಚ್ 31 ರವರೆಗೆ ಸಾರ್ವಜನಿಕರಿಂದ ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 29 (ಕರ್ನಾಟಕ ವಾರ್ತೆ)**

ಹಾಲಿ ಇರುವ 1,25,000 ರಹದಾರಿಯ ಸಂಖ್ಯೆಯನ್ನು 1,55,000 ಕ್ಕೆ ಹೆಚ್ಚಿಸಿ, ಅದರಲ್ಲಿ 25,000 ರಹದಾರಿಯನ್ನು ಎಲ್.ಪಿ.ಜಿ/ಸಿ.ಎನ್.ಜಿ. ಕಿಟ್ ಹೊಂದಿರುವ ಆಟೋರಿಕ್ಷಾಗಳಿಗೆ, 5,000 ವಿದ್ಯುತ್ ಚಾಲಿತ ಆಟೋರಿಕ್ಷಾಗಳಿಗೆ, 500 ಪಿಂಕ್ ಆಟೋರಿಕ್ಷಾಗಳಿಗೆ, (ಮಹಿಳಾ ಚಾಲಕರಿಗೆ) ಹೊಸ ಆಟೋರಿಕ್ಷಾ ರಹದಾರಿಯನ್ನು ಬೆಂಗಳೂರು ನಗರಕ್ಕೆ ಮುಂದಿನ 5 ವರ್ಷಗಳ ಅವಧಿಯಲ್ಲಿ ವಿತರಿಸಲು ಅನುಮೋದನೆ ಪಡೆಯಲಾಗಿದೆ.

ಮೊದಲ ಹಂತದಲ್ಲಿ 5,000 ಆಟೋರಿಕ್ಷಾ ರಹದಾರಿಗಳನ್ನು 4–ಸ್ಟ್ರೋಕ್ ಎಲ್.ಪಿ.ಜಿ./ಸಿ.ಎನ್.ಜಿ. ಕಿಟ್ ಹೊಂದಿರುವ ವಾಹನಗಳಿಗೆ ಬಿಡುಗಡೆಗೊಳಿಸಲು ನಿರ್ಧರಿಸಲಾಗಿದ್ದು, ಇದರಲ್ಲಿ 500 ಆಟೋರಿಕ್ಷಾ ರಹದಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಕಲ್ಯಾಣ ಕಾರ್ಯಕ್ರಮಗಳ ಸಾರಥಿ ಯೋಜನೆಯಡಿಯಲ್ಲಿ, ಮಹಿಳಾ ಫಲಾನುಭವಿಗಳಿಗೆ ಪಿಂಕ್ ಆಟೋರಿಕ್ಷಾಗಳಿಗೆ ಬಿಡುಗಡೆಮಾಡಿದೆ.

ಅಲ್ಲದೆ, 5,000 ಎಲೆಕ್ಟ್ರಿಕ್ ಆಟೋರಿಕ್ಷಾಗಳಿಗೆ ರಹದಾರಿ ನೀಡಲು ಉದ್ದೇಶಿಸಿದ್ದು, ಅದರಲ್ಲಿ 500 ಆಟೋರಿಕ್ಷಾಗಳ ರಹದಾರಿಯನ್ನು ಪಿಂಕ್ ಆಟೋರಿಕ್ಷಾಗಳಿಗೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಆಟೋರಿಕ್ಷಾ ರಹದಾರಿ ಮತ್ತು ರಾಜ್ಯ ಸಾರಿಗೆ ನಿಗಮಗಳು) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.